# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 538 |
| ಸದಸ್ಯರ ಹೆಸರು | : | ಡಾ\|\| ಉಮಾಶ್ರೀ |
| ಉತ್ತರಿಸುವ ದಿನಾಂಕ | : | 11/03/2025 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಪುರಸಭೆ ಹಾಗೂ ನಗರಸಭೆಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಒಟ್ಟು 60 ನಗರಸಭೆಗಳು ಮತ್ತು 126 ಪುರಸಭೆಗಳಿರುತ್ತವೆ. |
| ಆ | ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು; | ಪೌರಾಸೇವಾ ವೃಂದದ ವೃಂದ ಮತ್ತು ನೇಮಕಾತಿ ನಿಯಮಾವಳಿ 2010 ರ ರೀತ್ಯಾ ಪೌರಕಾರ್ಮಿಕರನ್ನು ನಗರಸಭೆಗಳಲ್ಲಿ ಶೇ.50% ರಷ್ಟು ನೇರಪಾವತಿ ಮೂಲಕ ಹಾಗೂ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಶೇ.100% ರಷ್ಟನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ರಾಜ್ಯದ ನಗರಸಭೆಗಳಲ್ಲಿ ಮತ್ತು ಪುರಸಭೆಗಳಲ್ಲಿ ಖಾಯಂ ಮತ್ತು ನೇರಪಾವತಿ ಸೇರಿ ಒಟ್ಟು 9,116 ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುತ್ತಾರೆ. |
| ಇ | ಈ ಕಾರ್ಮಿಕರನ್ನು ಖಾಯಂಗೊಳಿಸಲಾಗಿದೆಯೇ; | ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016 ದಿನಾಂಕ: 04-12-2017 ರ ಹಾಗೂ ಸರ್ಕಾರದ ಆದೇಶ ಸಂಖ್ಯೆ: ನಅಇ 176 ಜಿಇಎಲ್ 2022 (ಭಾ-2)(ಇ), ದಿನಾಂಕ: 23-11-2022 ರಲ್ಲಿ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ನೇರಪಾವತಿ/ದಿನಗೂಲಿ, ಕ್ಷೇಮಾಭಿವೃದ್ಧಿ ಗುತ್ತಿಗೆ/ಹೊರಗುತ್ತಿಗೆ/ಇತರೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ವಿಶೇಷ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿರುವಂತೆ 2017 ರಲ್ಲಿ 2603 ಮತ್ತು 2022 ರಲ್ಲಿ 4126 ಸೇರಿ ಒಟ್ಟು 6729 ಪೌರಕಾರ್ಮಿಕರುಗಳನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ನಅಇ 57 ಟಿಎಂಎಸ್ 2024 (ಇ), ದಿನಾಂಕ: 27-09-2024 ರಲ್ಲಿ 1100 ಹುದ್ದೆಗಳನ್ನು ಹಂಚಿಕೆ ಮಾಡಿ ಆದೇಶಿಸಲಾಗಿರುತ್ತದೆ. ಸದರಿ ಹುದ್ದೆಗಳನ್ನು ಸ್ಥಳೀಯ ಸಂಸ್ಥೆವಾರು ಹಂಚಿಕೆ ಮಾಡಿ ಆಯಾ ಜಿಲ್ಲಾಧಿಕಾರಿಗಳ ಹಂತದಲ್ಲಿ ನೇಮಕಾತಿ ಮಾಡುವ ಸಂಬಂಧ ಅಗತ್ಯ ಕ್ರಮ ವಹಿಸಲು ದಿನಾಂಕ:23-10-2024 ರಲ್ಲಿ ನಿರ್ದೇಶನಾಲಯದಿಂದ ಆದೇಶಿಸಲಾಗಿರುವಂತೆ ಕೋಲಾರ, ಚಿತ್ರದುರ್ಗ, ದಾವಣಗೆರೆ, ಉತ್ತರ ಕನ್ನಡ ಮತ್ತು ಯಾದಗಿರಿ (05) ಜಿಲ್ಲೆಗಳಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದು, ಅದರಲ್ಲಿ ಕೋಲಾರ ಜಿಲ್ಲೆಯ ಕೋಲಾರ ನಗರಸಭೆಯಲ್ಲಿ 66 ಪೌರಕಾರ್ಮಿಕರನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೇನೆನಿ 2024, ದಿನಾಂಕ:25-11-2024 ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಹಾಗೂ ಈ ದಿನಾಂಕದ ಪೂರ್ವದಲ್ಲಿ ನೇರನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿದ್ದಲ್ಲಿ ಅಥವಾ ಪ್ರಕ್ರಿಯ |

ಪ್ರಾರಂಭಗೊಂಡಿದ್ದಲ್ಲಿ ಅಂತಹ ನೇಮಕಾತಿಗಳಿಗೆ ಹೊರಡಿಸಲಾಗಿದ್ದ ಅಧಿಸೂಚನೆಯನ್ವಯ ಪೂರ್ಣಗೊಳಿಸಬಹುದಾಗಿದೆಂದು" ಆದೇಶಿಸಲಾಗಿರುತ್ತದೆ.

ಬಾಕಿ ಉಳಿದ 26 ಜಿಲ್ಲೆಗಳಲ್ಲಿನ ಪೌರಕಾರ್ಮಿಕರ ನೇಮಕಾತಿ ಅಧಿಸೂಚನೆ ಹೊರಡಿಸುವ ಕುರಿತು ನಿರ್ದೇಶನಾಲಯದಿಂದ ದಿನಾಂಕ:25-01-2025 ರಲ್ಲಿ ಸರ್ಕಾರದ ನಿರ್ದೇಶನ ಕೋರಲಾಗಿದ್ದು, ಈ ಬಗ್ಗೆ ಸಿಆಸು ಇಲಾಖೆಯ ಸುತ್ತೋಲೆ ದಿನಾಂಕ: 25-11-2024 ರ ಮೇಲೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯನ್ನು ದಿನಾಂಕ: 13/02/2025 ರಂದು ಅಭಿಪ್ರಾಯ ಕೋರಲಾಗಿದೆ.

ಈ ಪ್ರತಿಯೊಬ್ಬ ಕಾರ್ಮಿಕರು ಪಡೆಯುತ್ತಿರುವ ಸಂಭಳ ಎಷ್ಟು; ಈ ಸಂಭಳವನ್ನು ಸರ್ಕಾರವೇ ಭರಿಸುತ್ತಿದೆಯೇ;

ಖಾಯಂ ಪೌರಸೇವಾ ನೌಕರರಿಗೆ ಸರ್ಕಾರದ ಆದೇಶಾನುಸಾರ ಕಾಲಕಾಲಕ್ಕನುಗುಣವಾಗಿ ಹಾಗೂ ವೇತನ ಆಯೋಗದ ಆದೇಶದಂತೆ ಬದಲಾಗುವ ವೇತನದಂತೆಯೇ ಖಾಯಂ ಪೌರಕಾರ್ಮಿಕರಿಗೂ ಸಹ ವೇತನ ಪಾವತಿಸಲಾಗುತ್ತಿದೆ ವಿವರ ಕೆಳಗಿನಂತಿದೆ.

| **ಕ್ರ. ಸಂ** | **ವಿವರ** | **ವೇತನ ಶ್ರೇಣಿ** | **ಮೊತ್ತ ರೂ.** |
|---|---|---|---|
| **01** | Basic pay | 27000-46675 | 27,000 |
| **02** | DA (10.75%) | | 2,903 |
| **03** | HRA (7.5%) | | 2,025 |
| **04** | Medical Allowance | | 500 |
| **05** | Uniform Allowance | | 300 |
| **06** | Hardship Allowance | | 2,000 |
| | **Total** | | **34,728** |

ನೇರಪಾವತಿ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು 2024-25ನೇ ಸಾಲಿಗೆ ನಿಗದಿಪಡಿಸಿರುವ ಕನಿಷ್ಠ ವೇತನದ ಪ್ರಕಾರ ನಗರಸಭೆ ಗ್ರೇಡ್-1 ರೂ.**22205/-**, ನಗರಸಭೆ ಗ್ರೇಡ್-2 ರೂ.**21706/-** ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ರೂ.**21208/-** ವೇತನ ನೀಡಲಾಗುತ್ತಿದ್ದು ESI & PF ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.

1. ಪ್ರತಿಯೊಬ್ಬ ಪೌರಕಾರ್ಮಿಕರು 7ನೇ ವೇತನ ಶ್ರೇಣಿ: 27,000-46675 ರನ್ವಯ ವೇತನ ಪಡೆಯುತ್ತಿರುತ್ತಾರೆ.
2. ಪುರಸಭೆ ಹಾಗೂ ನಗರಸಭೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರುಗಳಿಗೆ ಸರ್ಕಾರದಿಂದ ಬಿಡುಗಡೆಯಾಗುವ ರಾಜ್ಯ ಹಣಕಾಸು ಆಯೋಗದ ವೇತನ ಅನುದಾನದಿಂದ ವೇತನವನ್ನು ಪಾವತಿಸಲಾಗುತ್ತಿದೆ.
3. ಕರ್ನಾಟಕ ಪುರಸಭೆಗಳ (ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು, 2022 ಅಡಿಯಲ್ಲಿ ನೇಮಕಾತಿ ಹೊಂದಿರುವ ಪೌರಕಾರ್ಮಿಕರುಗಳ ವೇತನವನ್ನು ಸರ್ಕಾರದ ಪತ್ರ (ಅನುಬಂಧ-1) ಹಾಗೂ ಈ ನಿರ್ದೇಶನಾಲಯದ ಸುತ್ತೋಲೆಯನ್ವಯ (ಅನುಬಂಧ-2) ರಾಜ್ಯ ಹಣಕಾಸು ಆಯೋಗದ ಮುಕ್ತನಿಧಿ ಅನುದಾನ ಹಾಗೂ ನಗರಸಭೆ ಹಾಗೂ ಪುರಸಭೆಗಳ ಸ್ವಂತ ನಿಧಿಗಳಿಂದ ಪಾವತಿಸಲಾಗುತ್ತಿದೆ.

| | | |
|---|---|---|
| ಉ | ಸರ್ಕಾರ ಪ್ರತಿ ವರ್ಷ ಈ ಕಾರ್ಮಿಕರ ಸಂಬಳಕ್ಕೆ ಮೀಸಲಿಟ್ಟ ಹಣವೆಷ್ಟು? | 2024-25 ನೇ ಸಾಲಿನಲ್ಲಿ ಖಾಯಂ ಪೌರಕಾರ್ಮಿಕರ ವೇತನ ಪಾವತಿಗಾಗಿ ರಾಜ್ಯ ಹಣಕಾಸು ಆಯೋಗದ ವೇತನ ನಿಧಿಯಲ್ಲಿ ಹಾಗೂ ಕರ್ನಾಟಕ ಪುರಸಭೆಗಳ (ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು, 2022 ಅಡಿಯಲ್ಲಿ ನೇಮಕಾತಿ ಹೊಂದಿರುವ ಪೌರಕಾರ್ಮಿಕರುಗಳ ವೇತನ ಪಾವತಿಗಾಗಿ ವೇತನದ ಭಾಗಶಃ ಮೊತ್ತ ರಾಜ್ಯ ಹಣಕಾಸು ಆಯೋಗದ ಮುಕ್ತನಿಧಿ ಅಡಿಯಲ್ಲಿ **ಒಟ್ಟು ರೂ.40884.77 ಲಕ್ಷಗಳನ್ನು** ಸರ್ಕಾರದಿಂದ ಮೀಸಲಿರಿಸಲಾಗಿದೆ. ವಿವರ ಈ ಕೆಳಕಂಡಂತಿದೆ: |

(ರೂ.ಲಕ್ಷಗಳಲ್ಲಿ)

| ವಿವರ | ಎಸ್‌ಎಫ್‌ಸಿ ವೇತನನಿಧಿ | ಎಸ್‌ಎಫ್‌ಸಿ ಮುಕ್ತನಿಧಿ |
|---|---|---|
| ಖಾಯಂ ಪೌರಕಾರ್ಮಿಕರುಗಳ ವೇತನ ಪಾವತಿಗಾಗಿ. | 30982.37 | - |
| ವಿಶೇಷ ನೇಮಕಾತಿ ನಿಯಮಗಳು 2022 ರ ಅಡಿಯಲ್ಲಿ ನೇಮಕಾತಿ ಹೊಂದಿರುವ ಪೌರಕಾರ್ಮಿಕರುಗಳ ವೇತನ ಪಾವತಿಗಾಗಿ | - | 9902.40 |
| **ಒಟ್ಟು** | **30982.37** | **9902.40** |

**ಸಂಖ್ಯೆ:** ನಅಇ 10 ಎಲ್‌ಸಿಕ್ಯೂ 2025

(**ರಹೀಂ ಖಾನ್**)
ಪೌರಾಡಳಿತ ಮತ್ತು ಹಜ್ ಸಚಿವರು